


## ಕೇಕ್‌ನಲ್ಲಿ ಎಂಜಿನಿಯರ್ ಜಾಣತನ!

ದೇಶ ಕಂಡ ಅಪ್ರತಿಮ ಎಂಜಿನಿಯರ್ ಡಾ. ಸರ್. ಎಂ. ವಿಶ್ವೇಶ್ವರಯ್ಯ ಅವರ ಹುಟ್ಟಿದ ದಿನವನ್ನು ಪ್ರತಿವರ್ಷದಂತೆ 'ಎಂಜಿನಿಯರ್ ದಿನ'ವಾಗಿ ಈಚೆಗೆ (ಸೆ. 15) ಆಚರಿಸಲಾಯಿತು. ಈಗಾಗಲೇ ಅಸ್ತಿತ್ವದಲ್ಲಿದ್ದ ಪ್ರಪಂಚವನ್ನು ವಿಜ್ಞಾನಿಗಳು ಆವಿಷ್ಕರಿಸಿದರೆ, ಎಂಜಿನಿಯರ್‌ಗಳು ಅಸ್ತಿತ್ವದಲ್ಲಿಲ್ಲದ ಜಗತ್ತನ್ನು ಸೃಷ್ಟಿಸಿದರು ಎಂಬ ಮಾತಿದೆ. ಅದೇನೇ ಇರಲಿ ಇಲ್ಲೊಬ್ಬ ಗೃಹಿಣಿಯು ಎಂಜಿನಿಯರ್ ದಿನದ ಪ್ರಯುಕ್ತ ಎಂಜಿನಿಯರ್ ಶೈಲಿಯಲ್ಲಿ ಕೇಕ್ ತಯಾರಿಸಿ ಗಮನ ಸೆಳೆದಿದ್ದಾರೆ. 'ಒಂದು ಕೆಲಸದಲ್ಲಿ ಯಶಸ್ವಿಯಾಗಬೇಕಾದರೆ ಆ ಕೆಲಸ ಮಾಡುವವರು ಮೊದಲು ಅದನ್ನು ಪ್ರೀತಿಸಬೇಕು' ಎಂಬುದು ಸರ್. ಎಂ.ವಿ. ಮಾತು. ಅದನ್ನು ಸ್ಫೂರ್ತಿಯಾಗಿ ಪರಿಗಣಿಸಿರುವ ಗೃಹಿಣಿ ರಮ್ಯಾ ಕಿರಣ್ ತನ್ನಲ್ಲಿನ ಎಂಜಿನಿಯರಿಂಗ್ ಜಾಣತನ, ಪ್ರೀತಿಯನ್ನು ಕೇಕ್ ಮೇಲೆ ಮೂಡಿಸಿದ್ದಾರೆ. ಅವರು ಪ್ರೀತಿಯಿಂದ ಮಾಡಿದ ಈ ಕೆಲಸ ಜನರ ಮನಸೂರೆಗೊಂಡು ನಂತರ ಬಾಯಿಗೆ ಸಿಹಿಯಾಗಿದೆ.

—ವೀಣಾ ಶಂಕರ್, ಬೆಂಗಳೂರು




## ಕೀಟ ವಿಸ್ಮಯ

ನಮ್ಮ ಮನೆಯ ಬಾಲ್ಕನಿಯಲ್ಲಿ ವೀಳ್ಯದ ಎಲೆಯ ಗಿಡವಿದೆ. ಒಂದಿನ ಸಂಜೆ ಗಿಡಕ್ಕೆ ನೀರು ಹಾಕಲು ಹೋದಾಗ ತುಂಡಾದ ಮರದ ಟೊಂಗೆ (ಸುಮಾರು ಮೂರು ಇಂಚು ಉದ್ದವಿರಬಹುದು) ಎಲೆಯ ಮೇಲೆ ಬಿದ್ದಿರುವುದು ಕಂಡಿತು. ತುಂಡಾದ ಮರದ ಟೊಂಗೆ ಎಲೆಯ ಮೇಲಿರಲು ಹೇಗೆ ಸಾಧ್ಯ ಎಂಬ ಪ್ರಶ್ನೆ ಮೂಡಿತು. ಹತ್ತಿರದಿಂದ ನೋಡಿದೆ, ಸ್ವಲ್ಪ ಸಂಶಯ ಬಂದು ಅದನ್ನು ಎಲೆಯಿಂದ ಸಾವಕಾಶವಾಗಿ ಕೆಳಗೆ ಬೀಳಿಸಲು ಪ್ರಯತ್ನಿಸಿದೆ. ಅದು ಗಟ್ಟಿಯಾಗಿ ಹಿಡಿದುಕೊಂಡಂತೆ ಅನ್ನಿಸಿತು. ಇನ್ನೂ ಸ್ವಲ್ಪ ಜೋರಾಗಿ ತಳ್ಳಲು ಪ್ರಯತ್ನಿಸಿದೆ, ಆಗ ಅದರ ಕಾಲುಗಳು ಹೊರಬಂದವು. ಆಗ, ಇದು ಮರದ ಟೊಂಗೆಯಲ್ಲ ಕೀಟವೆಂದು ತಿಳಿದು 'ಅಬ್ಬಾ' ಅನ್ನಿಸಿತು. ನೋಡಲು ತುಂಡಾದ ಚಿಕ್ಕ ಮರದ ಟೊಂಗೆಯಂತಿರುವ ಇದಕ್ಕೆ ಬಫ್‌ಟಿಪ್ ( **Bufftip** ) ಎನ್ನುತ್ತಾರೆ. ಹಗಲಿನಲ್ಲಿ ಹೆಚ್ಚಾಗಿ ಮಲಗುವ ಈ ಕೀಟಕ್ಕೆ ವೈರಿಗಳಿಂದ ತಪ್ಪಿಸಿಕೊಳ್ಳಲು ಪ್ರಕೃತಿಯು ನೀಡಿದ ವರದಾನವೇ ಟೊಂಗೆಯ ರೂಪ. ರಾತ್ರಿಯಲ್ಲೇ ಇವುಗಳ ಹಾರಾಟ ಜಾಸ್ತಿ, ಹಾಗಾಗಿ ಇದನ್ನು ನೋಡುವ ಅವಕಾಶ ಕಡಿಮೆ. ಇದು **Phalerinae ( Notodontidae)** ಫ್ಯಾಮಿಲಿಗೆ ಸೇರಿದೆ.

—ಆರ್ಕೆ ಆಡುಕಳ, ಬೆಂಗಳೂರು

